**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ.1159/2018**

| | | |
|---|---|---|
| ಹೆಸರು | ಸಾಂಭಶಿವ | ಪ್ರಾ.ಸಾ.1 |
| ತಂದೆ/ಗಂಡನ ಹೆಸರು | ಈಶ್ವರಪ್ಪ | ಚಾ.ಸಾ.1 |
| ವಯಸ್ಸು | 42 ವರ್ಷ | |
| ಕೆಲಸ | ದೋಬಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ಕಗ್ಗದಾಸಪುರ | 10.06.2025 |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ : -**

ಚಾ.ಸಾ.2, 3 ಮತ್ತು 4 ರವರ ಪರಿಚಯ ನನಗೆ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಯಾರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಮೃತ ಈಶ್ವರಪ್ಪ ನವರು ನನಗೆ ತಂದೆಯಾಗಬೇಕು. ನಾನು ಪೋಲಿಸ್ ಠಾಣೆಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಅದು ದೂರು ಆಗಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ದಾಖಲೆಯನ್ನು **Ex.P-1** ಎಂದು, ಸಾಕ್ಷಿಯ ಸಹಿಯನ್ನು **Ex.P-1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಅದು ಸ್ಥಳ ಪಂಚನಾಮೆ ಆಗಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ದಾಖಲೆಯನ್ನು **Ex.P-2** ಎಂದು, ಸಾಕ್ಷಿಯ ಸಹಿಯನ್ನು **Ex.P-2(ಎ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಕಡತದಲ್ಲಿರುವ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ವಿಚಾರಿಸಬೇಕಾಗಿ ಎಪಿಪಿರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಬೇಕಾಗಿ ನ್ಯಾಯಾಲಯದಲ್ಲಿ ವಿನಂತಿಸಿದ ಮೇರೆಗೆ ಅನುಮತಿಯನ್ನು ನೀಡಿರುತ್ತದೆ.)**

**<u>ಪಾಟೀ ಸವಾಲುಃ ಸರ್ಕಾರದ ಪರವಾಗಿ ಎಪಿಪಿ ರವರಿಂದಃ</u>**

ದಿ.17.07.2018 ರಂದು ರಾತ್ರಿ ಸುಮಾರು 3:00 ಗಂಟೆ ಸಮಯದಲ್ಲಿ ನಮ್ಮ ತಂದೆ ಈಶ್ವರಪ್ಪ ನವರ ಮೊಬೈಲ್ ನಿಂದ ಯಾರೋ ಕರೆ ಮಾಡಿ ಹೊಸಕೋಟೆ ತಾಲ್ಲೂಕು, ಹೊಸಕೋಟೆ-ಚಿಂತಾಮಣಿ ರಸ್ತೆ ಗ್ರಾಮದ ಬಳಿ ಬಿಳಿ ಕಾರು ಮತ್ತು ಟೆಂಪೂ ಅಪಘಾತವಾಗಿ ವಾಗಿ ಈಶ್ವರಪ್ಪನವರು ಸ್ಥಳದಲ್ಲಿ ಮೃತ ಪಟ್ಟಿರುತ್ತಾರೆ ಮತ್ತು ಜೊತೆಯಲ್ಲಿದ್ದ ಚಾ.ಸಾ.2 ರವರಿಗೆ ಪೆಟ್ಟಾಗಿರುತ್ತದೆ ಮತ್ತು ಚಾ.ಸಾ.2 ರವರನ್ನು ಹೊಸಕೋಟೆಯ ಎಂ.ವಿ.ಜೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿರುತ್ತಾರೆ ಎಂದು ಹೇಳಿದ ನಂತರ ನಾನು ವಿಷಯ ತಿಳಿದ ಸ್ಥಳಕ್ಕೆ ಹೋಗಿ ನೋಡಲಾಗಿ ವಿಷಯ ನಿಜವಾಗಿರುತ್ತದೆ, ನಂತರ ಚಾ.ಸಾ.2 ರವರ ಮಗಳಿಗೆ ವಿಷಯ ತಿಳಿಸಿರುತ್ತೇನೆ, ನಮ್ಮ ತಾಯಿ ಮಂಗಮ್ಮನವರನ್ನು ವಿಚಾರ ಮಾಡಿ ನೋಡಿದಾಗ, ದಿ:16.04.2018 ರಂದು ರಾತ್ರಿ ಸುಮಾರು 9:45 ಗಂಟೆಯ ಸಮಯದಲ್ಲಿ ಕಗ್ಗದಾಸಪುರದ ವಾಸಿ ಚಾ.ಸಾ.2 ರವರು ಪೋನ್ ಮಾಡಿ ನನ್ನ ಮಾರುತಿ ವ್ಯಾಗನ್ ಕಾರ್ ನಂ.ಕೆ.ಎ.53-ಎಂ.ಬಿ-623 ರಲ್ಲಿ ಮದನಪಲ್ಲಿಗೆ ಹೋಗಿ ಬರೋಣವೆಂದು ಹೇಳಿದರು. ಅವರನ್ನು ಕರೆದುಕೊಂಡು ಬರುವುದಾಗಿ ಹೇಳಿ ಮನೆಯಿಂದ ಹೋಗಿರುತ್ತಾರೆ, ದಿ:16.04.2018 ರಂದು ರಾತ್ರಿ ಕೆ.ಎ.53-ಎಂ.ಬಿ-623 ಕಾರಿನಲ್ಲಿ ಬೆಂಗಳೂರು ಬಿಟ್ಟು ರಾತ್ರಿ ಸುಮಾರು 2:45 ಗಂಟೆಯ ಸಮಯದಲ್ಲಿ ಹೊಸಕೋಟೆ -ಚಿಂತಾಮಣಿ ರಸ್ತೆ, ಹಿಂಡಿಗಾನಹಳ್ಳಿ ಗ್ರಾಮದ ಬಳಿ ಚಿಂತಾಮಣಿ ಕಡೆಯಿಂದ ಬೆಂಗಳೂರು ಕಡೆಗೆ ಬರುತ್ತಿದ್ದ, ಬಲೋರೋ ಟೆಂಪೋ ವಾಹನದ ಚಾಲಕ ಅತಿ ವೇಗವಾಗಿ ನಿರ್ಲಕ್ಷತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಖಿಮುಖಿ ಡಿಕ್ಕಿ ಹೊಡೆಸಿದ ಪರಿಣಾಮ ಕಾರಿನ ಮುಂಭಾಗ ಪೂರ್ತಿ ಜಖಂಗೊಂಡು ಕಾರು ಚಾಲನೆ ಮಾಡುತ್ತಿದ್ದ ನಮ್ಮ ತಂದೆಯವರಿಗೆ ಎದೆಗೆ, ಕೈಕಾಲುಗಳಿಗೆ ಪೆಟ್ಟಾಗಿ ಸ್ಥಳದಲ್ಲೇ ಮೃತ ಪಟ್ಟಿರುತ್ತಾರೆ ಮತ್ತು ಚಾ.ಸಾ.2 ರವರಿಗೆ ತಲೆಗೆ, ಕಾಲುಗಳಿಗೆ ಪೆಟ್ಟಾಗಿ ರಕ್ತಗಾಯಗಳಾಗಿರುತ್ತದೆ. ರಸ್ತೆಯಲ್ಲಿ ಹೋಗುತ್ತಿದ್ದ ಜನರು ಚಾ.ಸಾ.2 ರವರನ್ನು ಉಪಚರಿಸಿ,

ಹೊಸಕೋಟೆಗೆ ಕಳುಹಿಸಿರುತ್ತಾರೆ. ಈ ಮೇಲಿನಂತೆ ಪೋಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿ:17.04.2018 ರಂದು ಮಧ್ಯಾಹ್ನ 4:30 ರಿಂದ 05:30 ಗಂಟೆಯವರೆಗೆ ನಾನು ತೋರಿಸಿದ ಘಟನಾ ಸ್ಥಳವಾದ ಹಿಂಡಿಗನಾಳ ಗ್ರಾಮದ ಮುನಿರಾಜು ಮನೆಯ ರಸ್ತೆಯಲ್ಲಿ ಚಾ.ಸಾ-3 ಮತ್ತು 4 ರವರ ಸಮಕ್ಷಮ ಪಂಚನಾಮೆಯ ಕ್ರಮ ಜರುಗಿಸಿ ಬರೆದ ಪಂಚನಾಮೆಗೆ ನಾನು, ಚಾಸಾ-3 ಮತ್ತು 4 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ತಂದೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿದ್ದರಿಂದ, ಆರೋಪಿ ಪರ ಪಾಟೀ ಸವಾಲನ್ನು ಇಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**